# ಸಂಸದನಾಗಿ ಬೆಳಗಾವಿಯ ಸೇವೆ ಮಾಡಲು ಆರ್ಶೀವದಿಸಿ : ಜಗದೀಶ ಶೆಟ್ಟರ



ಬೆಳಗಾವಿ: ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಕ್ಕೆ ಎಂಟ್ರಿಯಾಗಲು ವಕೀಲ ವೃತ್ತಿ ಗರಡಿ ಮನೆಯಾಗಿದ್ದು ಆ ವೃತ್ತಿಯ ನೈಪುಣ್ಯತೆಯಿಂದ ರಾಜ್ಯದಲ್ಲಿ ದಾಖಲೆಯ 10ವರ್ಷ ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡಲು ಸಾಧ್ಯವಾಗಿದ್ದು ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ಸಂಸದನಾಗಿ ಬೆಳಗಾವಿಯ ಸೇವೆ ಮಾಡಲು ಆರ್ಶಿವದಿಸಬೇಕೆಂದು ಪಟ್ಟಣದ ನ್ಯಾಯಾಲಯದಲ್ಲಿ ಮಾಜಿ ಮುಖ್ಯಮಂತ್ರಿ ಲೊಕಸಭಾ ಅಭ್ಯರ್ಥಿ ಜಗದೀಶ್ ಶೆಟ್ಟರ್ ಮತಯಾಚನೆ ಮಾಡಿದರು.

ಬೈಲಹೊಂಗಲ ಪಟ್ಟಣದ ನ್ಯಾಯವಾದಿಗಳ ಸಂಘಕ್ಕೆ ಮಂಗಳವಾರ ಬೆಟ್ಟಿ ಕೊಟ್ಟು ವಕಿಲರನ್ನುದ್ದೇಶಿಸಿ ಮಾತನಾಡಿ, ನನ್ನ ತಂದೆಯ ಮಾರ್ಗ ದರ್ಶನದಲ್ಲಿ ವಕೀಲ ವೃತ್ತಿ ಪ್ರಾರಂಭಿಸಿ ಜನಸಾಮನ್ಯರ ಕಷ್ಟಗಳನ್ನು ಹತ್ತಿರದಿಂದ ನೊಡಿದ್ದು ಜನಸಂಘದಲ್ಲಿ ಕಾರ್ಯ ನಿರ್ವಹಿಸಿದ್ದರಿಂದ ಸಮಾಜ ಸೇವೆ ಕರಗತಮಾಡಿಕೊಂಡಿದ್ದರಿಂದ ಶಾಸಕನಾಗಿ ಎರಡನೆ ಭಾರಿ ಆಯ್ಕೆಯಾದ ಕೂಡಲೆ ವಿಧಾನ ಸಭೆಯ ವಿರೊಧಪಕ್ಷದ ನಾಯಕನಾಗಿ ರಾಜ್ಯದ ಇತಿಹಾಸದಲ್ಲಿ 10 ವರ್ಷ ಯಾರು ಪೊರೈಸಿಲ್ಲ. ಸಭಾಪತಿಯಾಗಿ ಮಂತ್ರಿಯಾಗಿ ಹಾಗೂ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ಅನುಭವ ಹಾಗೂ ಎರಡು ಬಾರಿ ಬೆಳಗಾವಿ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿ ಸುವರ್ಣಸೌಧ ನಿರ್ಮಾಣದಲ್ಲಿ ಮತ್ತು ಉದ್ಘಾಟನೆ ಸಮಯದಲ್ಲಿಮಾಡಿದ ನನ್ನ ಕಾರ್ಯಕ್ಕೆ ಬೆಳಗಾವಿ ಲೊಕಸಭೆಯ ಅಭ್ಯರ್ಥಿಯಾಗಿ ಬಿಜೆಪಿ ವರಿಷ್ಠರು ಅಯ್ಕೆ ಮಾಡಿದ್ದು ತಮ್ಮೆಲ್ಲರ ಆರ್ಶಿವಾ ದದಿಂದ ಸಂಸದನಾಗಿ ಇ ಭಾಗದ ಕಳಸಾ ಬಂಡೂರಿ ನಾಲಾ ಜೊಡನೆ, ಸಾಂಬ್ರಾ ವಿಮಾನ ನಿಲ್ದಾಣ ಮೇಲದರ್ಜೆಗೆ ಎರಿಸುವದು ವಂದೆ ಭಾರತ ರೈಲು ಸಂಪರ್ಕ ಹಾಗೂ 125 ಸಂವತ್ಸರ ಕಂಡ ಬೈಲಹೊಂಗಲ ನ್ಯಾಯಾಲಯಕ್ಕೆ ಬೇಕಾದ ಎಲ್ಲ ಸಹಾಯ ಸಹಕಾರ ನೀಡುತ್ತೇನೆ ನಿಮ್ಮ ಬೆಂಬಲ ನನಗಿರಲಿ ಎಂದರು.

ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಮ್.ಆರ್. ಮೆಳವೆಂಕಿ ಮಾತನಾಡಿ, ನ್ಯಾಯವಾದಿಗಳು ಮೊದಿಯವರ ಕಾರ್ಯ ಮೆಚ್ಚಿ ಸಂಪೂರ್ಣ ವಾದ ಬೆಂಬಲವನ್ನು ಬಿಜೆಪಿ ಅಭ್ಯರ್ಥಿ ಜಗದೀಶ್ ಶೆಟ್ಟರ್ ಅವರಿಗೆ ನೀಡಿ ಅವರ ಆಯ್ಕೆಗೆ ನ್ಯಾಯವಾದಿಗಳು ಶ್ರಮಿಸುವದಾಗಿ ಹೇಳಿದರು. ಈ ಸಂದರ್ಭದಲ್ಲಿ ನ್ಯಾಯವಾದಿ ಎಫ್.ಎಸ್.ಸಿದ್ದನಗೌಡರ ಮಾತನಾಡಿದರು. ಪ್ರಚಾರ ಸಭೆಯಲ್ಲಿ ಮಾಜಿ ಶಾಸಕರಾದ ಡಾ.ವಿ.ಆಯ್. ಪಾಟೀಲ, ಜಗದೀಶ್ ಮೆಟಗುಡ್, ಜೆಡಿಎಸ್ ಜಿಲ್ಲಾಧ್ಯಕ್ಷ ಶಂಕರ ಮಾಡಲಗಿ, ನ್ಯಾಯವಾದಿಗಳಾದ ಆರ್.ಎಸ್. ಮಮದಾಪೂರ, ಎಮ್. ವಾಯ್. ಸೊಮಣ್ಣವರ, ಸಿ.ಎಸ್. ಚಿಕ್ಕನಗೌಡರ, ಚಿದಾನಂದ ದೇಮಶೆಟ್ಟಿ, ದೇವರಾಜ ಬಸ್ತವಾಡೆ, ಎಸ್.ಬಿ.ಪಾಗದ, ಎ.ಎಮ್. ಸಿದ್ರಾಮನಿ, ವಿಠಲ ಕಟದಾಳ, ಎಸ್.ವಿ. ಸಿದ್ದಮನಿ, ಎಸ್. ವಾಯ್.ಪಾಟಿಲ, ಬಿ.ಎಮ್. ಮೂಲಿಮನಿ, ಎ.ಎಫ್. ಪಟ್ಟಿಹಾಳ, ಎನ್.ಕೆ .ಮೆಳ್ಳಿಕೇರಿ, ಎಸ್.ಎನ್. ರಾಯರ, ಎಸ್.ಜಿ. ಬುದಯ್ಯನ ವರಮಠ, ಬಿ.ಎಫ್ .ಪತ್ತಾರ, ಎಸ್.ಡಿ.ಪಾಟೀಲ, ಸಂಜಯ ಜುಮೆತ್ರಿ, ಎನ್.ಕೆ. ಕುಲಕರ್ಣಿ, ಎಮ್.ಎಮ್. ಅಲಯ್ಯನವರಮಠ, ಆರ್. ಎಫ್.ಕುರಬರ, ಆನಂದ ನರಸಣ್ಣವರ ಹಾಗೂ ವಿಜಯ ಮೆಟಗುಡ್, ಗುರುಪಾದ ಕಳ್ಳಿ, ಗುರು ಮೆಟಗುಡ್, ಜಗದೀಶ್ ಬೂದಿಹಾಳ, ಬಸನಗೌಡ ಶಿದ್ರಾಮನಿ, ಸಂತೋಷ ಹಡಪದ ಮುಂತಾದ ನ್ಯಾಯವಾದಿಗಳು ಇದ್ದರು

# ಹಿಡಕಲ್ ಡ್ಯಾಂ ಬಿಜೆಪಿಯಿಂದ ಕಾಂಗ್ರೇಸ್ ಸೇರ್ಪಡೆ




ಯಮಕನಮರಡಿ:–ಹಿಡಕಲ್ ಡ್ಯಾಂ ನ ಯುವ ಧುರೀಣರಾದ ರಾಜು ಗಳಾಟೆ ಅವರ ನೇತೃತ್ವದಲ್ಲಿ ಬಿ,ಜೆ,ಪಿ, ಕಾರ್ಯಕರ್ತರು ಕಾಂಗ್ರೇಸ್ ಪಕ್ಷಕ್ಕೆ ಸೇರ್ಪಡೆಯಾದರು ಹಿಡಕಲ್ ಡ್ಯಾಂ ಹೊಸಪೇಟ ಗ್ರಾಮ ಪಂಚಾಯತ ಅಧ್ಯಕ್ಷೆ ಸುಹಾಸಿನ ಮಗದುಮ್ಮ, ಸದಸ್ಯರಾದ ರೇಣುಕಾ ಬೂದಿಹಾಳ, ಸದಾನಂದ ಮಳ್ಯಾಗೋಳ, ರಮೇಶ ಹುರಳಿ, ಅರ್ಜುನ ನೆಸರಗಿ, ಚಂದ್ರವ್ವಾ ಮಾದರ, ಗಣೇಶ ಚಿಂಚಿ ಸುಶಾಂತ ಮಗದುಮ್ಮ ಸೇರಿದಂತೆ ಹಲವಾರು ಕಾರ್ಯಕರ್ತರು ಬಿ,ಜೆ,ಪಿ, ಪಕ್ಷವನ್ನು ತೊರೆದು ಮಾಜಿ ಸಚಿವ ಎ,ಬಿ,ಪಾಟೀಲ, ಹಾಗೂ ಶಶಿಕಾಂತ ನಾಯಿಕ ಅವರ ನೇತೃತ್ವದಲ್ಲಿ ಸಚಿವ ಸತೀಶ ಜಾರಕಿಹೊಳಿ ಕೈ ಬಲಪಡಿಸಲು ಕಾಂಗ್ರೇಸ್ ಪಕ್ಷಕ್ಕೆ ಸೇರ್ಪಡೆಯಾದರು, ಈ ಸಂದರ್ಭದಲ್ಲಿ ಮಾಜಿ ಸಚಿವ ಎ,ಬಿ,ಪಾಟೀಲ, ಮಹೇಶ ಪಾಟೀಲ, ಶಿವಲಿಂಗ ನೇಸರಗಿ, ಅಜಿತ ಮಾದರ, ಸುಶಾಂತ ಮಗದುಮ್ಮ, ಅಡಿವೆಪ್ಪ ಖೋಡಿ, ಗಣೇಶ ಚಿಂಚಿ ಮುಂತಾದವರು ಉಪಸ್ಥಿತರಿದ್ದರು,

# ಹಳ್ಳೂರ ಮತ್ತು ಸಂಗನಕೇರಿ ಚೆಕ್ ಪೋಸ್ಟ್‌ದಲ್ಲಿ ದಾಖಲೆ ಇಲ್ಲದ 2.67 ಲಕ್ಷ ರೂ ವಶ



ಮೂಡಲಗಿ: ತಾಲ್ಲೂಕಿನ ಹಾಗೂ ಅರಭಾವಿ ಮತ ಕ್ಷೇತ್ರದ ವ್ಯಾಪ್ತಿಯ ಹಳ್ಳೂರ ಕ್ರಾಸ್ ಬಳಿಯ ಹಾಗೂ ಸಂಗನಕೇರಿ ಕ್ರಾಸ್ ಚೆಕ್ ಪೋಸ್ಟ್‌ದಲ್ಲಿ ಮಂಗಳವಾರದಂದು ದಾಖಲೆ ಇಲ್ಲದ ಒಟ್ಟು 2.67 ರೂ ಹಣವನ್ನು ಚುನಾವಣೆಯ ಎಫ್.ಎಸ್.ಟಿ ಮತ್ತು ಎಸ್.ಎಸ್.ಟಿ ತಂಡ ಹಾಗೂ ಪೊಲೀಸ್ ಸಿಬ್ಬಂದಿಗಳು ತಪಾಸಣೆ ವೇಳೆಯಲ್ಲಿ ವಶಪಡಿಸಿಕೊಂಡಿದ್ದಾರೆ. ಹಳ್ಳೂರ ಚೆಕ್ ಪೋಸ್ಟದಲ್ಲಿ ಮೂಧೋಳ ದಿಂದ ನಿಪ್ಪಾಣಿ ಕಡೆಗೆ ಹೊರಟ್ಟಿದ ವಾಹನದಲ್ಲಿ ದಾಖಲೆ ಇಲ್ಲದ 95400 ರೂಪಾಯಿ ಮತ್ತು ಸಂಗನಕೇರಿ ಕ್ರಾಸ್ ಚೆಕ್ ಪೋಸ್ಟ್‌ದಲ್ಲಿ ಒಂದು ವಾಹನದಲ್ಲಿ 60000 ಮತ್ತೊಂದು ವಾಹನದಲ್ಲಿ 112500 ರೂ ವಶ ಪಡಿಸಿಕೊಂಡಿದ್ದಾರೆ.

ಹಳ್ಳೂರ ಚೆಕ್ ಪೋಸ್ಟ್‌ದಲ್ಲಿ ಮೂಡಲಗಿ ಸಿ.ಪಿ.ಐ ಅಬ್ದುಲ್‌ವಾಜೀದ್ ಪಟೇಲ್, ಎಫ್.ಎಸ್.ಟಿ ತಂಡದ ಎಸ್.ಬಿ.ನಂದಗಾವಿ, ಎಸ್.ಎಲ್.ಬಬಲಿ, ಪೊಲೀಸ್ ಇಲಾಖೆಯ ಹನಮಂತ ಪುಗಶೆಟ್ಟಿ ಹಾಗೂ ಎಸ್‌ಎಸ್‌ಟಿ ತಂಡದವರು ಇದ್ದರು.

# ಡಾ.ಅಂಬೇಡ್ಕರ ಜಯಂತಿ ನಿಮಿತ್ಯ ಸಂಭ್ರಮದಿಂದ ಉತ್ಸವ ಮೇರವಣಿಗೆ



ಮೂಡಲಗಿ: ಡಾ. ಬಾಬಾಸಾಹೇಬ್ ಅಂಬೇಡ್ಕರ ಅವರ 133ನೇ ಜಯಂತಿ ಅಂಗವಾಗಿ ಸೋಮವಾರ ಸಂಜೆ ಮೂಡಲಗಿ ಪಟ್ಟಣದಲ್ಲಿ ಸಂಭ್ರಮದಿಂದ ಡಾ. ಬಿ.ಆರ್.ಅಂಬೇಡ್ಕರ ಅವರ ಭಾವ ಚಿತ್ರದ ಮೇರವಣಿಗೆ ಸಗಡಗರ ಸಂಭ್ರಮದಿಂದ ಜರುಗಿತು.

ಪಟ್ಟಣದ ಡಾ.ಅಂಬೇಡ್ಕರ ವೃತ್ತದಲ್ಲಿ ಡಾ.ಅಂಬೇಡ್ಕರ ಭಾವಚಿತ್ರಕ್ಕೆ ಮೂಡಲಗಿ–ಗೋಕಾಕ ತಾಲೂಕಾ ಕಾಸಪ ಸಂಘದ ಗೌರವಾಧ್ಯಕ್ಷ ಸರ್ವೋತ್ತಮ ಜಾರಕಿಹೊಳಿ ಪೂಜೆಸಲ್ಲಿಸಿ ಉತ್ಸವದ ಮೇರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯೂ ಕಲ್ಮೇಶ್ವರ ವೃತ್ತ, ಚೆನ್ನಮ್ಮ ವೃತ್ತ, ಕರೇಮ್ಮದೇವಿ ವೃತ್ತ, ಬಸವೇಶ್ವರ ವೃತ್ತ, ಸಂಗಪ್ಪ ವೃತ್ತದ ಮಾರ್ಗವಾಗಿ ಅಂಬೇಡ್ಕರ ಭವನಕ್ಕೆ ಬಂದು ಅಂತ್ಯಗೊಂಡಿತು. ಈ ಸಂದರ್ಭದಲ್ಲಿ ಡಿ.ಎಸ್.ಎಸ್ ಜಿಲ್ಲಾ ಅಧ್ಯಕ್ಷ ರಮೇಶ ಸಣ್ಣಕ್ಕಿ, ಮುಖಂಡರಾದ ರವೀಂದ್ರ ಸೋನವಾಲ್ಕರ, ಮರೇಪ್ಪ ಮರೇಪ್ಪಗೋಳ, ರವೀಂದ್ರ ಸಣ್ಣಕ್ಕಿ, ರಾಮಣ್ಣ ಹಂದಿಗುಂದ, ಶಾಬಪ್ಪ ಸಣ್ಣಕ್ಕಿ, ಅಶೋಕ ಶಿದ್ದಲಿಂಗಪ್ಪಗೋಳ, ಯಶವಂತ ಮಂಟೂರ, ಸುರೇಶ ಸಣ್ಣಕ್ಕಿ, ರಾಜು ಪರಸನ್ನವರ, ರಾಮಣ್ಣ ಬಂಗೆನ್ನವರ, ಯಲ್ಲಪ್ಪ ಸಣ್ಣಕ್ಕಿ, ಹಣಮಂತ ಅಕ್ಕಿಮಡ್ಡಿ, ಸುಂದರ ಬಾಲಪನ್ನವರ, ಆನಂದ ಬಡಿಗವಾಡ, ಪ್ರಭಾಕರ ಮಂಟೂರ, ವಿಲ್ಸನ್ ಧವಳೇಶ್ವರ ಹಾಗೂ ಸಾರ್ವಜನಕರು ಇದ್ದರು.

# ಡಾ.ಸೈಯದ್ ನಾಸೀರ್ ಹುಸೇನ್ ಅವರಿಗೆ ಅಧ್ದೂರಿ ಸ್ವಾಗತ

ಬಳ್ಳಾರಿ ಏ : ಎರಡನೇ ಬಾರಿಗೆ ರಾಜ್ಯಸಭೆ ಸದಸ್ಯರಾದ ಬಳಿಕ ಡಾ.ಸೈಯದ್ ನಾಸೀರ್ ಹುಸೇನ್ ನಗರಕ್ಕೆ ಆಗಮಿಸಿದಾಗ ಸಚಿವ ಬಿ.ನಾಗೇಂದ್ರ, ಶಾಸಕ ನಾರಾ ಭರತ್ ರೆಡ್ಡಿ ಮತ್ತು ಕಾಂಗ್ರೆಸ್ ಕಾರ್ಯಕರ್ತರಿಂದ ಅದ್ದೂರಿ ಸ್ವಾಗತ ನಡೆಯಿತು. ತೆರೆದ ವಾಹನದಲ್ಲಿದ್ದವರಿಗೆ ಎರಡು ಜೆಸಿಬಿ ಮೂಲಕ ಪುಷ್ಪ ಹಾಕುವ ಮೂಲಕ ಪಟಾಕಿ ಸಿಡಿಸಿ ಬೈಕ್ ರ‍್ಯಾಲಿ ಮಾಡಿ ಅದ್ದೂರಿ ಮೆರವಣಿಗೆಯನ್ನು ಇಂದಿರಾ ವೃತ್ತದಿಂದ ಗಡಗಿ ಚೆನ್ನಪ್ಪ ವೃತ್ತ, ಗವಿಯಪ್ಪ ವೃತ್ತದಿಂದ ಕೌಲಬಜಾರ್ ವರೆಗೆ ಮೆರವಣಿಗೆ ಸಾಗಿತು. ಸಾವಿರಾರು ಸಂಖ್ಯೆಯಲ್ಲಿ ಸೇರಿದ ಜನಸ್ತೋಮ. ಡಿಜೆ ಹಾಡು ಹಾಕುವ ಮೂಲಕ ಪ್ರಚಾರ ನಡೆಯಿತು.



# ಮಗುವಿನ ಕಲಿಕೆಯಲ್ಲಿ ಕೌಟುಂಬಿಕ ಹಾಗೂ ಸಾಮಾಜಿಕ ಸಂಬಂದಗಳ ಪಾತ್ರ ಮಹತ್ವದ್ದು– ಗಿರೆಣ್ಣವರ



ಮೂಡಲಗಿ: ಮಗುವಿನ ಕಲಿಕೆಯಲ್ಲಿ ಹಾಗೂ ಬೆಳವಣಿಗೆಯಲ್ಲಿ ಕೌಟುಂಬಿಕ ಹಾಗೂ ಸಾಮಾಜಿಕ ಸಂಬಂಧಗಳೂ ಕೂಡ ತುಂಬಾ ಪರಿಣಾಮ ಬೀರುತ್ತವೆ ಎಂದು ಪ್ರಧಾನ ಗುರುಗಳಾದ ಎ.ವ್ಹಿ ಗಿರೆಣ್ಣವರ ಹೇಳಿದರು.

ಅವರು ತಾಲೂಕಿನ ತುಕ್ಕಾನಟ್ಟಿಯ ಸರಕಾರಿ ಮಾದರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗಾಗಿ ಜೀವನ ಕೌಶಲ್ಯ ತರಬೇತಿಯ ಸಂಬಂಧಗಳ ನಕಾಶೆ ಅಧಿವೇಶನದಲ್ಲಿ ಭಾಗವಹಿಸಿ ಮಾತನಾಡಿ. ಮಗುವಿನ ಕಲಿಕೆಯ ಆರಂಭಿಕ ಹಂತದಲ್ಲಿ ಸುತ್ತಲಿನ ಪರಿಸರದ ಜೊತೆಗೆ ಕೌಟುಂಬಿಕ ಪರಿಸರದಲ್ಲಿ ಹತ್ತಿರದ ಸಂಬಂಧಗಳು ಹಾಗೂ ಸಾಮಾಜಿಕ ವಲಯದಲ್ಲಿ ಸಂಬಂಧಗಳು ಮಕ್ಕಳ ಮೇಲೆ ಪ್ರಭಾವ ಬೀರುತ್ತವೆ. ಮಕ್ಕಳ ಎಳೆ ವಯಸ್ಸಿನಲ್ಲಿ ಪಾಲಕರು ಹಾಗೂ ಶಿಕ್ಷಕರು ಇದರ ಬಗ್ಗೆ ಗಮನ ನೀಡುವರು ತುಂಬಾ ಅವಶ್ಯಕವಾಗಿದೆ ಎಂದರು.

ಬೆಳಗಾವಿಯ ಶಾನೂರ ಹಿರೇಹೊಳಿ ಮಾತನಾಡಿ, ಮಕ್ಕಳ ಮಾನಸಿಕ ಸಂಬಂಧಗಳನ್ನು ಅವರ ಮನಸ್ಸಿನ ತುಮುಲಗಳನ್ನು ಅವರ ಅರಿವಿಗೆ ಬಾರದಂತೆ ತಿಳಿದುಕೊಳ್ಳಲಾಗುತ್ತಿದೆ. ಶಿಕ್ಷಕರಾಗಲಿ ಪಾಲಕರಾಗಲಿ ಮಕ್ಕಳಿಗೆ ಅಕ್ಷರ ಜ್ಞಾನ ಮೂಡಿಸಿದರೆ ಸಾಲದು ಅವರ ವಾಸ್ತವ ಬದುಕು ಹಾಗೂ ಭವಿಷ್ಯದ ಬದುಕು ಲಕ್ಷದಲ್ಲಿಟ್ಟುಕೊಂಡು ಮಕ್ಕಳನ್ನು ಬೆಳೆಸಬೇಕಾದಿರುವದು ತುಂಬಾ ಅವಶ್ಯ ಎಂದರು.

ಬೇಸಿಗೆ ರಜಾ ಅವಧಿಯಲ್ಲಿ ಕೇವಲ ಬಿಸಿಯೂಟ ಅಲ್ಲದೇ ಕಲಿಕೆಗೆ ಒತ್ತು ನೀಡುತ್ತಿರುವ ಸಂದರ್ಭದಲ್ಲಿ ಇವತ್ತು ಶಾನೂರ ಹಿರೇಹೊಳಿ ಪೀಲ್ಡ ಇನ್ವೆಸ್ಟಿಗೇಟರ ಐ.ಸಿ.ಎಮ್.ಆರ್. ಕೆ.ಎಲ್.ಇ. ಬೆಳಗಾವಿ ಇವರು ಆಗಮಿಸಿ ಜೀವನ ಕೌಶಲ್ಯ ತರಬೇತಿ ಸಂಬಂಧಗಳ ನಕಾಶೆ ಎನ್ನುವ ವಿಶೇಷ ಶೀರ್ಷಿಕೆಯಡಿ ಮಕ್ಕಳಿಗೆ ಸಂಬಂಧಗಳ ತಿಳುವಳಿಕೆ ಹಾಗೂ ಮಕ್ಕಳ ಭಾವನಾತ್ಮಕ ವಿಷಯಗಳನ್ನು ಅರಿತುಕೊಳ್ಳುವ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ಸುಮಾರು 50 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶಿಕ್ಷಕರಾದ ವಿಮಲಾಕ್ಷಿ ತೋರಗಲ, ಖಾತೂನ ನದಾಫ, ಸೋಮಶೇಖರ ಉಪಸ್ಥಿತರಿದ್ದರು.

# ಎಂಡಿಆರ್‌ಎಸ್ ವಸತಿ ಶಾಲೆ ಪ್ರವೇಶ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಕೊಪ್ಪಳ, ಏಪ್ರಿಲ್ : ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ನಿರ್ವಹಣೆಯಾಗುತ್ತಿರುವ ಕೊಪ್ಪಳ ಜಿಲ್ಲೆಯಲ್ಲಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಡಾ||ಎ.ಪಿ.ಜೆ.ಅಬ್ದುಲ್ ಕಲಾಂ ಶಾಲೆಗಳಲ್ಲಿ 2024–25 ನೇ ಸಾಲಿಗೆ 6 ನೇ ತರಗತಿಯ ಪ್ರವೇಶಕ್ಕೆ ಅರ್ಜಿ ಸಲ್ಲಿಕೆ ಅವಧಿಯನ್ನು ವಿಸ್ತರಿಸಲಾಗಿದೆ

ಪೋಷಕರು/ವಿದ್ಯಾರ್ಥಿಗಳು ಹತ್ತಿರದ ವಸತಿ ಶಾಲೆ/ಮಾಹಿತಿ ಕೇಂದ್ರ ಕಛೇರಿಗಳಲ್ಲಿ ಎಲ್ಲಾ ದಾಖಲೆಗಳೊಂದಿಗೆ ಭೇಟಿ ನೀಡಿ ಆನ್‌ಲೈನ್ ಮುಖಾಂತರ ಸೇವಾಸಿಂಧು ಪೋರ್ಟಲ್ https:// sevasindhuservices. karnataka.gov.in ಅಥವಾ dom.karnataka.gov.in/koppal/ public ನಲ್ಲಿ ನೇರವಾಗಿ ಅರ್ಜಿಗಳನ್ನು ಸಲ್ಲಿಸಲು ಏಪ್ರಿಲ್ 30 ರವರೆಗೆ ಅವಧಿ ವಿಸ್ತರಿಸಲಾಗಿದೆ.

ಅರ್ಜಿ ಸಲ್ಲಿಸಲು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕುಕನೂರು: 9844040035, ತಳಕಲ್: 6361118478, ಕುದರಿಮೋತಿ: 9740702035, ಟಣಕನಕಲ್: 9902690349, ಹಿರೇಬೆಣಕಲ್–1: 9483395708, ಹಿರೇಬೆಣಕಲ್–2: 8150924173, ಹಿರೇಬನ್ನಿಗೋಳ: 9591439223, ಅಲ್ಪಸಂಖ್ಯಾತರ ನವೋದಯ ಮಾದರಿಯ ವಸತಿ ಶಾಲೆ ಹಿರೇಸಿಂದೋಗಿ: 8747092789, ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಯಲಬುರ್ಗಾ\ಕುಷ್ಟಗಿ\ಗಂಗಾವತಿ, ಜಿಲ್ಲಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಕೊಪ್ಪಳ ಇಲ್ಲಿಗೆ ಭೇಟಿ ನೀಡಬೇಕು.ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು 5 ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಡಾ||ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ ಶೇ.75 ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಮತ್ತು ಶೇ.25 ಇತರೆ ವರ್ಗದವರಿಗೆ ಮೀಸಲಿಡಲಾಗಿದೆ. ಅಲ್ಪಸಂಖ್ಯಾತರ ವರ್ಗದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ಹಾಗೂ ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ಮಿತಿಯೊಳಗಿರಬೇಕು. ಹಿಂದುಳಿದ ವರ್ಗಗಳ 2ಎ, 3ಎ ಮತ್ತು 3ಬಿ ಅಭ್ಯರ್ಥಿಗಳ ಹಾಗೂ ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ಮಿತಿಯೊಳಗಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ಮಿತಿಯೊಳಗಿರಬೇಕು. ಅಂಗವಿಕಲ ವಿದ್ಯಾರ್ಥಿಗಳಿಗೆ ಶೇ.05, ಮಾಜಿ ಸೈನಿಕರಿಗೆ ಶೇ. 04 ಮೀಸಲಾತಿ ಕಾಯ್ದಿರಿಸಲಾಗಿದೆ. ವಿಶೇಷ ದುರ್ಬಲ ವರ್ಗಕ್ಕೆ ಶೇ.05, ಸಫಾಯಿ ಕರ್ಮಚಾರಿ ವಿದ್ಯಾರ್ಥಿಗಳಿಗೆ ಶೇ. 05 ಮೀಸಲಾತಿ ಕಾಯ್ದಿರಿಸಲಾಗಿದೆ.

ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯೊಂದಿಗೆ ಕಂದಾಯ ಇಲಾಖೆಯ ತಹಶೀಲ್ದಾರ ನೀಡಿದ ಜಾತಿ ಮತ್ತು ಆದಾಯ ದೃಢೀಕರಣ ಪ್ರಮಾಣ ಪತ್ರ, ವಾಸಸ್ಥಳ ಪ್ರಮಾಣ ಪತ್ರ, ಆಧಾರ ಕಾರ್ಡ್ ಹಾಗೂ ವಿದ್ಯಾರ್ಥಿಯ ಪಾಸ್ ಪೋರ್ಟ್ ಅಳತೆಯ ಇತ್ತೀಚಿನ 4 ಭಾವಚಿತ್ರಗಳೊಂದಿಗೆ ಮತ್ತು ನಿಗದಿಪಡಿಸಿದ ದಿನಾಂಕದೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕು. ಅಪೂರ್ಣವಾದ ಮತ್ತು ತಡವಾಗಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಕಛೇರಿ ಹಾಗೂ ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ಕೊಪ್ಪಳ 08539–225070, 8088892549, ಗಂಗಾವತಿ–9972524670, ಕುಷ್ಟಗಿ–8861610578, ಯಲಬುರ್ಗಾ–9620522537 ವಿಳಾಸಗಳಿಗೆ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕುಡತಿನಿ: ಪಂಜಿನ ಮೆರವಣಿಗೆ ಮೂಲಕ ಮತದಾನ ಜಾಗೃತಿ

ಬಳ್ಳಾರಿ,ಏ..ಕಡ್ಡಾಯ ಮತ್ತು ನೈತಿಕ ಮತದಾನ ಕುರಿತು ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ಮತ್ತು ಕುಡತಿನ ಪುರಸಭೆ ಕಾರ್ಯಾಲಯ ಇವರ ವತಿಯಿಂದ ಕುಡುತಿನ ಪಟ್ಟಣದಲ್ಲಿ ಸೋಮವಾರ ಸಂಜೆ ಪಂಜಿನ ಮೆರವಣಿಗೆ ನಡೆಸಿ ಮತದಾನ ಜಾಗೃತಿ ಮೂಡಿಸಲಾಯಿತು.ಹಣಕ್ಕೆ ಮತ ಮಾರಿಕೊಳ್ಳಬೇಡಿ, ಅರ್ಹರಿಗೆ ಮತ ನೀಡಿ, ಮತದಾನ ನಮ್ಮ ಹಕ್ಕು ಎನ್ನುವ ಘೋಷಣೆಗಳನ್ನು ಕೂಗಿದರು.

ಕುಡತಿನ ಪುರಸಭೆಯ ಮುಖ್ಯಾಧಿಕಾರಿ ಜೆ.ಸೂರ್ಯಕಾಂತ ಅವರು ಮಾತನಾಡಿ, ಮೇ 07 ರಂದು ನಡೆಯವ ಲೋಕಸಭಾ ಚುನಾವಣೆಯಲ್ಲಿ ಪಟ್ಟಣದಲ್ಲಿ ಅತಿ ಹೆಚ್ಚು ಮತದಾನ ಮಾಡಿ ಜಿಲ್ಲೆಗೆ ಮಾದರಿಯಾಗಬೇಕು ಎಂಬ ಉದ್ದೇಶದಿಂದ ಮತದಾರರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಪ್ರಜ್ಞಾವಂತ ಮತದಾರರು ತಪ್ಪದೇ ಮತದಾನ ಮಾಡಿ ಎಂದು ಕರೆ ನೀಡಿದರು.ಪುರಸಭೆ ಕಚೇರಿಯಿಂದ ಪ್ರಾರಂಭಗೊಂಡ ಜಾಥಾ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.ಈ ಸಂದರ್ಭದಲ್ಲಿ ಪುರಸಭೆ ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.ಪುರಸಭೆ ಕಚೇರಿಯಿಂದ ಪ್ರಾರಂಭಗೊಂಡ ಜಾಥಾ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.ಈ ಸಂದರ್ಭದಲ್ಲಿ ಪುರಸಭೆ ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.

# ಮತದಾನದ ಪವಿತ್ರ ಕಾರ್ಯದಲ್ಲಿ ಎಲ್ಲರೂ ಪಾಲ್ಗೊಳ್ಳೋಣ: ಗಿಣಗೇರಾ ಪಿಡಿಒ



ಕೊಪ್ಪಳ, ಏಪ್ರಿಲ್ 17 : ಮತದಾನ ಎನ್ನುವದು ಪವಿತ್ರ ಕಾರ್ಯ. ಪ್ರಜಾಪ್ರಭುತ್ವದಲ್ಲಿ ಮತ ಚಲಾವಣೆಗೆ ಅವಕಾಶ ಇರುವದು ಸಂವಿಧಾನವು ನಮಗೆ ದೊಡ್ಡ ಕೊಡುಗೆಯಾಗಿದೆಂದು ಗಿಣಿಗೇರಾ ಪಂಚಾಯತ ಅಭಿವೃದ್ದಿ ಅಧಿಕಾರಿ ಮಂಜುಳಾ ದೇವಿ ಹೂಗಾರ ಹೇಳಿದರು.

ಬುಧವಾರದಂದು ಕೊಪ್ಪಳ ತಾಲೂಕಿನ ಗಿಣಿಗೇರಾ ಗ್ರಾಮ ಪಂಚಾಯತಿಯ ನರೇಗಾ ಕಾಮಗಾರಿ ಸ್ಥಳವಾದ ಗಿಣಿಗೇರಾ ಗ್ರಾಮದ ಕೆರೆ ಕಾಮಗಾರಿಯಲ್ಲಿ ಗ್ರಾಮ ಪಂಚಾಯತಿ ಸ್ವೀಪ್ ಸಮಿತಿ ವತಿಯಿಂದ ಕೂಲಿಕಾರರಿಗೆ ಜರುಗಿದ ಸ್ವೀಪ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮೇ–7ರಂದು ಜರುಗುವ ಚುನಾವಣೆಯಲ್ಲಿ ಕಡ್ಡಾಯವಾಗಿ ಮತಗಟ್ಟೆ ಕೇಂದ್ರಕ್ಕೆ ಹೋಗಿ ಮತ ಚಲಾಯಿಸುವುದರ ಮೂಲಕ ಸುಭದ್ರ ದೇಶವನ್ನಾಗಿ ನಿರ್ಮಿಸೋಣ. ಚುನಾವಣೆ ಆಯೋಗ ನಿಗದಿಪಡಿಸಿದ ದಾಖಲಾತಿಗಳನ್ನು ತೆಗೆದುಕೊಂಡು ಹೋಗಿ ನಮಗೆ ಸೂಕ್ತ ಎನಸುವ ವ್ಯಕ್ತಿಗೆ ಮತ ಚಲಾಯಿಸಬೇಕು. ಸ್ವೀಪ್ ಕಾರ್ಯಕ್ರಮಗಳನ್ನು ಪ್ರಾರಂಭಿಸಿ ಜಾಗೃತಿ ಮೂಡಿಸಲಾಗುತ್ತಿದ್ದು, ನರೇಗಾ ಕೂಲಿಕಾರರು ಮತದಾನ ಮಾಡಿ ಇತರರಿಗೆ ಮಾದರಿಯಾಗಬೇಕೆಂದು ಕರೆ ನೀಡಿದರು. ಕಳೆದ ಬಾರಿಗಿಂತ ಈ ಬಾರಿ ವಿನೂತನವಾಗಿ ಸ್ವೀಪ್ ಕಾರ್ಯಕ್ರಮಗಳನ್ನು ಜರುಗಿಸುವ ಮೂಲಕ ಜಿಲ್ಲೆಯ ಮತದಾನ ಶೇಕಡಾವಾರು ಪ್ರಮಾಣವನ್ನು ಹೆಚ್ಚಿಸಲು ನಾವೆಲ್ಲರೂ ಚುನಾವಣಾ ಆಯೋಗಕ್ಕೆ ಕೈ ಜೋಡಿಸೋಣ. ಮತದಾನ ಪವಿತ್ರವಾದ ಕಾರ್ಯ. ಮತದಾನ ಮೂಲಕ ದೇಶಕ್ಕೆ ದೊಡ್ಡ ಕೊಡುಗೆ ನೀಡಿದಂತಾಗುತ್ತದೆ. ಸ್ವೀಪ್ ಕಾರ್ಯಕ್ರಮದಲ್ಲಿ ಸೇರಿರುವ ಎಲ್ಲಾ ನರೇಗಾ ಕೂಲಿಕಾರರು ನಮ್ಮ ಕುಟುಂಬದ 18 ವರ್ಷ ಮೇಲ್ಪಟ್ಟ ಸದಸ್ಯರು ಮತ ಚಲಾಯಿಸುವ ಮೂಲಕ ದೇಶಕ್ಕೆ ಸುಭದ್ರ ಆಡಳಿತ ಒದಗಿಸಲು ಕೈ ಜೋಡಿಸಿ. ಮತ ಚಲಾವಣೆ ತುಂಬಾ ಜವಾಬ್ದಾರಿಯುತವಾದ ಕಾರ್ಯ. ಆ ಮೂಲಕ ನಾವುಗಳು ಯಾವುದೇ ಆಸೆ, ಅಮೀಷಗಳಿಗೆ ಬಲಿಯಾಗದೇ ನಿರ್ಭಯವಾಗಿ ಮತ ಚಲಾಯಿಸಬೇಕೆಂದು ಕರೆ ನೀಡಿದರು. ನಂತರ ಮತದಾರರ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಸ್ವೀಪ್ ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಮಂಜುನಾಥ ಭಾವಿಕಟ್ಟಿ, ತಾಂತ್ರಿಕ ಸಹಾಯಕಿ ಅಕ್ಷತಾ ಕುಮಾರಿ, ಬೇರ್ ಫೂಟ್ ಟೆಕ್ನಿಷಿಯನ್ ದಾವಲಸಾಬ ಮುಲ್ಲಾ, ಕರವಸೂಲಿಗಾರ ಈಶ್ವರಯ್ಯ, ಡಿಇಒ ರಾಜಾಭಕ್ಷಿ, ನೀರಗಂಟಿ ಶ್ರೀಕಾಂತ ಪೂಜಾರ, ಕಾಯಕ ಬಂಧುಗಳು, 825 ನರೇಗಾ ಕೂಲಿಕಾರರು ಭಾಗವಹಿಸಿದ್ದರು.